# ಫೆಡರರ್ ನಿವೃತ್ತಿಯ ಸುಳಿವಿಲ್ಲ

**ಕೊ**ರೊನಾ ವೈರಸ್ ನೀಡಿರುವ ಕಡ್ಡಾಯ ರಜೆ ರೋಜರ್ ಫೆಡರರ್‌ಗೆ ಒಂದು ರೀತಿಯಲ್ಲಿ ವರದಾನವೇ ಆಗಿದೆ. ಆತ ತನ್ನ ಎರಡನೆಯ ಮೊಣಕಾಲಿನ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡದ್ದೂ ಆಯಿತು. ಶಸ್ತ್ರಚಿಕಿತ್ಸೆಯ ಬಳಿಕ ಚೇತರಿಸಲು ಅವಕಾಶ ಸಿಕ್ಕಂತೆಯೂ ಆಯಿತು. ಈ ಹಿಂದಿನ ಯೋಜನೆಯಂತೆ ಎರಡನೇ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಬಳಿಕ ಆತನಿವೃತ್ತಿ ಪ್ರಕಟಿಸಬೇಕಿತ್ತು. ಆದರೆ ಫೆಡರರ್ ಸದ್ಯಕ್ಕೆ ನಿವೃತ್ತಿಯ ಯೋಚನೆಯನ್ನು ಕೈಬಿಟ್ಟಿದ್ದಾರೆ. ಕೊರೊನಾ ಹಾವಳಿ ಮುಗಿದ ಬಳಿಕ ಆರಂಭವಾಗುವ ಸೀಸನ್‌ನಲ್ಲಿ ಇನ್ನೊಂದೆರಡು ಕಪ್ ಎತ್ತಿಕೊಳ್ಳುವ ಹವಣಿಕೆ ಆತನದ್ದು. ಮುಂದಿನ ತಿಂಗಳು ಫೆಡರರ್‌ಗೆ 39 ವರ್ಷ ತುಂಬಲಿದೆ. ಅತ್ಯಧಿಕ ದೈಹಿಕ ಫಿಟ್‌ನೆಸ್ ಬೇಡುವ ಕ್ರೀಡೆಗಳಲ್ಲಿ ಟೆನಿಸ್ ಮುಂಚೂಣಿಯಲ್ಲಿದೆ. ಹಾಗಾಗಿ ಆಟಗಾರನ ವಯಸ್ಸೂ ಮುಖ್ಯವೇ. ಫುಟ್‌ಬಾಲ್‌ನಲ್ಲಾದರೆ ಜೊತೆಗಾರನ ಮೇಲೆ ಭರವಸೆ ಇಟ್ಟು ಸ್ವಂತ ಆಟವನ್ನು ಸ್ವಲ್ಪ ನಿಧಾನಿಸಬಹುದು; ಆದರೆ ಟೆನಿಸ್ ಸಿಂಗಲ್ಸ್‌ನಲ್ಲಿ ಅದಕ್ಕೆ ಅವಕಾಶವೇ ಇಲ್ಲ. ಹಾಗಿದ್ದೂ ಫೆಡರರ್ ನಿವೃತ್ತಿಯನ್ನು ಮುಂದೂಡಲು ಕಾರಣವೇನಿರಬಹುದು?



2021ರ ಆಸ್ಟ್ರೇಲಿಯನ್ ಗ್ರ್ಯಾನ್‌ಪ್ರಿ ಓಪನ್ ಟೂರ್ನಿಯ ಮೇಲೆ ಫೆಡರರ್ ಕಣ್ಣಿದೆ ಎನ್ನುವುದು ಒಂದು ಲೆಕ್ಕಾಚಾರ. ಮೂರು ತಿಂಗಳ ಹಿಂದೆ ನಿವೃತ್ತಿಯ ಕುರಿತು ಪತ್ರಕರ್ತರು ಪ್ರಶ್ನಿಸಿದಾಗ ಫೆಡರರ್ ಕೂಡಾ ಇಂತಹದ್ದೊಂದು ಕ್ಲೂ ಬಿಟ್ಟುಕೊಟ್ಟಿದ್ದರು. ‘ನೋಡೋಣ, ಆಸ್ಟ್ರೇಲಿಯನ್ ಓಪನ್ ಬರಲಿ’ ಎನ್ನುವ ಮಾತು ಬಂದಿತ್ತು. ಅದಕ್ಕೆಂದೇ ಈ ವರ್ಷದ ಆರಂಭದಲ್ಲಿ ಇನ್ನೆರಡು ಎಟಿಪಿ ಪಂದ್ಯಗಳನ್ನು ಆಡದೆ ಬಿಟ್ಟುಕೊಟ್ಟದ್ದೂ ನಡೆಯಿತು.

ಒಟ್ಟು 20 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ತನ್ನ ಖಾತೆಗೆ ಸೇರಿಸಿಕೊಂಡಿರುವ ರೋಜರ್ ಫೆಡರರ್‌ಗೆ ಇನ್ನೂ ಒಂದು ಲೆಕ್ಕಾಚಾರ ಇರುವಂತಿದೆ. ತನ್ನ ಬೆನ್ನ ಹಿಂದೆಯೇ ದಾಖಲೆಗಳನ್ನು ಬೆನ್ನು ಹತ್ತಿರುವ ಜೊಕೊವಿಕ್ ಮತ್ತು ರಫಾ ನಡಾಲ್ ಅವರನ್ನು ದಾಖಲೆಗಳಿಂದ ಸಾಧ್ಯವಾದಷ್ಟು ತಡೆಯಬೇಕು ಎನ್ನುವುದು ಆ ಲೆಕ್ಕಾಚಾರ ಎನ್ನಲಾಗುತ್ತಿದೆ. ಜೊಕೊವಿಕ್ ಈಗ ಒಟ್ಟು 17 ಗ್ರ್ಯಾನ್‌ಸ್ಲಾಮ್‌ಗಳನ್ನು ಗೆದ್ದುಕೊಂಡಿದ್ದರೆ, ನಡಾಲ್ 19 ಗ್ರ್ಯಾನ್‌ಸ್ಲಾಮ್‌ಗಳನ್ನು ಗೆದ್ದುಕೊಂಡಿದ್ದಾರೆ. ಮುಂದಿನ ಯುಎಸ್ ಓಪನ್‌ನಲ್ಲಿ ಗೆದ್ದು ಫೆಡರರ್ ದಾಖಲೆಯನ್ನು ಸರಿಗಟ್ಟುವ ಯೋಚನೆ ನಡಾಲ್‌ರದ್ದು. ಅದೇ ವೇಳೆ ಅತ್ಯಧಿಕ ವಾರಗಳ ಕಾಲ ವಿಶ್ವ ರಾಂಕಿಂಗ್‌ನಲ್ಲಿ ನಂಬರ್ ಒನ್ ಸ್ಥಾನವನ್ನು ಉಳಿಸಿಕೊಂಡಿರುವ ಫೆಡರರ್ ದಾಖಲೆಯನ್ನು ಮುರಿಯುವ ಉತ್ಸಾಹ ಜೊಕೊವಿಕ್‌ರದ್ದು. ಅತ್ಯಧಿಕ 310 ವಾರಗಳ ಕಾಲ ವಿಶ್ವದ ನಂಬರ್ ಒನ್ ರಾಂಕಿಂಗ್‌ಅನ್ನು ಹೊಂದಿರುವ ಫೆಡರರ್ ದಾಖಲೆಯ ತೀರಾ ಸನಿಹದಲ್ಲಿ ಜೊಕೊವಿಕ್ ಇರುವುದು ಕುತೂಹಲಕರ.

ಕೊರೊನಾ ಕಾಟದಿಂದ ಟೋಕಿಯೊ ಒಲಿಂಪಿಕ್ಸ್ 2021ಕ್ಕೆ ಮುಂದೂಡಿದ್ದು ಫೆಡರರ್ ಗೆ ಒಂದು ರೀತಿಯಲ್ಲಿ ವರದಾನವೆಂದೇ ಹೇಳಬಹುದು. ‘ನಿವೃತ್ತಿಯ ವಯಸ್ಸು ಹತ್ತಿರ ಬಂದಿದೆ ಎನ್ನುವುದು ನನಗೆ ಗೊತ್ತು. ಆದರೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಆಡುವ ಗುರಿಯೊಂದಿದೆ. ಅದು ನನಸಾಗಬೇಕು. 2000ದಲ್ಲಿ ನನ್ನ ಮೊದಲ ಒಲಿಂಪಿಕ್ಸ್ ಆಟ ಇದೇ ಟೋಕಿಯೋದಲ್ಲಿ ನಡೆಯಿತು. ಅಲ್ಲೇ ನಾನು ನನ್ನ ಪತ್ನಿಯನ್ನು ಮೊದಲ ಬಾರಿಗೆ ಭೇಟಿ ಆದದ್ದು’ ಎನ್ನುವ ಮಧುರ ನೆನಪುಗಳನ್ನೂ ಅವರು ಹಂಚಿಕೊಂಡಿದ್ದಾರೆ.

‘ಫೆಡರರ್, ಜೊಕೊವಿಕ್ ಮತ್ತು ನಡಾಲ್ ಮಧ್ಯೆ ಯಾರು ಸಾರ್ವಕಾಲಿಕ ಶ್ರೇಷ್ಠ ಆಟಗಾರರು?’ ಎನ್ನುವ ಅಭಿಮಾನಿಗಳ ಚರ್ಚೆ ನಡೆದೇ ಇದೆ. ಸದ್ಯಕ್ಕೆ ಅತ್ಯಧಿಕ ಗ್ರ್ಯಾನ್‌ಸ್ಲಾಮ್ ಮತ್ತು ಅತ್ಯಧಿಕ ವಾರಗಳ ಕಾಲ ವಿಶ್ವದ ನಂಬರ್ ಒನ್ ರಾಂಕಿಂಗ್ ಇರುವ ಹಿನ್ನೆಲೆಯಲ್ಲಿ ಫೆಡರರ್ ಈ ಸ್ಥಾನಕ್ಕೆ ಸರ್ವಸಮ್ಮತ ಆಯ್ಕೆ. ಆದರೆ ಇನ್ನೂ 33ರ ಹರೆಯದ ನಡಾಲ್, ಫೆಡರರ್ ದಾಖಲೆಗಳನ್ನು ಇಂದಲ್ಲ ನಾಳೆ ಮುರಿಯುವುದು ಖಚಿತ. ಇನ್ನು ಕೆಲವರ ಪ್ರಕಾರ, ಆತನನ್ನು ಹಿಂದಿಕ್ಕುವ ಸಾಮರ್ಥ್ಯ ಜೊಕೊವಿಕ್‌ಗಿದ್ದು ಆತನೇ ಅತ್ಯಧಿಕ ಗ್ರ್ಯಾನ್‌ಸ್ಲಾಮ್ ವಿಜೇತನಾಗಬಹುದು. ಯಾವ ಹೊಸಬರಿಗೂ ಮೇಲೇರಲು ಅವಕಾಶ ಕೊಡದೆ, ಕಳೆದ 13 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಈ ಮೂವರೇ ಬಾಚಿಕೊಂಡಿರುವುದು ವಿಶೇಷ. ಮೇನಲ್ಲಿ ನಡೆಯಬೇಕಿದ್ದ ಫ್ರೆಂಚ್ ಓಪನ್ ಸೆಪ್ಟೆಂಬರ್‌ಗೆ ಮುಂದಕ್ಕೆ ಹೋಗಿದೆ. ಜುಲೈನಲ್ಲಿ ನಡೆಯಬೇಕಿದ್ದ ವಿಂಬಲ್ಡನ್‌ಅನ್ನೂ ಮುಂದೂಡಲಾಗಿದೆ. ಇವೆರಡೂ ಈ ವರ್ಷವೇ ನಡೆದರೆ ರೋಜರ್ ಫೆಡರರ್ ಮುನ್ನಡೆಯನ್ನು ತಳ್ಳಿ ಹಾಕುವುದು ಕಷ್ಟ. ಆತನ ಅತ್ಯುನ್ನತ ಫಿಟ್‌ನೆಸ್ ಮಟ್ಟ ಟೆನಿಸ್ ಲೋಕದಲ್ಲಿ ಒಂದು ಸೋಜಿಗದ ಸಂಗತಿಯೇ.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65